ಆ) ಈ ಸಂರಕ್ಷಿಸಲ್ಪಟ್ಟಿರುವ ಪ್ರದೇಶಗಳಲ್ಲಿ ಪ್ರಸಕ್ತ ಇರುವ ಹುಲಿಗಳ ಸಂಖ್ಯೆ ಎಷ್ಟು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):-

ಅ) 1989-90 81.52 ಲಕ್ಷಗಳು
1990-91 93.39 ಲಕ್ಷಗಳು
1991-92 162.65 ಲಕ್ಷಗಳು

ಆ) ಐವತ್ತೆಂಟು

## ಮೀನುಗಾರಿಕೆ ಕಾಲೇಜುಗಳ ಸಂಖ್ಯೆ

**324 (139)** ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ):-

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ಕಾಲೇಜುಗಳು ಎಲ್ಲೆಲ್ಲಿ ಇವೆ ?

ಆ) 1989-90, 1990-91 ಮತ್ತು 1991-92ರಲ್ಲಿ ಎಷ್ಟು ವಿದ್ಯಾರ್ಥಿಗಳು ಮೀನುಗಾರಿಕೆ ಪದವಿ ಪಡೆದು ಹೊರಬಂದಿರುತ್ತಾರೆ; (ವಾರ್ಷಿಕವಾರು ವಿವರ ನೀಡುವುದು);

ಇ) ಇವರಿಗೆಲ್ಲಾ ಉದ್ಯೋಗದ ಅವಕಾಶ ಸಿಗುತ್ತದೆಯೇ;

ಈ) ಉದ್ಯೋಗ ಸಿಗದೆ ಇದ್ದಲ್ಲಿ ಅವರ ಬವಣೆಯನ್ನು ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ) ರಾಜ್ಯದಲ್ಲಿ ಒಂದು ಮೀನುಗಾರಿಕೆ ಕಾಲೇಜು ಮಂಗಳೂರಿನಲ್ಲಿವೆ.

ಆ) 1989-90ರಲ್ಲಿ 19 ವಿದ್ಯಾರ್ಥಿಗಳು
1990-91ರಲ್ಲಿ 34 ವಿದ್ಯಾರ್ಥಿಗಳು
1991-92ರಲ್ಲಿ 21 ವಿದ್ಯಾರ್ಥಿಗಳು

ಇ) ಸಾಮಾನ್ಯವಾಗಿ ಈ ಪದವೀಧರರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿವೆ.

ಈ) ಉದ್ಭವಿಸುವುದಿಲ್ಲ.

## ಬೆಳಗಾಂವದಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ

**325 (855)** ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ):-

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯ ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ನೀಡುವುದು);